ಬೆಂಗಳೂರಿನ ಸುರಾನ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಎನ್.ಸಿ. ಮಹೇಶ್, ಸಾಹಿತ್ಯ ಮತ್ತು ರಂಗಭೂಮಿಯ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡವರು. 'ಬೆಳಕು ಸದ್ದುಗಳನ್ನು ಮೀರಿ', 'ಸರಸ್ವತಿ ಅಕಾಡಮಿ' ಎಂಬ ಕಥಾಸಂಕಲನಗಳು, 'ತಮ್ಮ ತೊಟ್ಟಿಲುಗಳ ತಾವೇ ಜೀಕಿ' ಪ್ರಕಟಿತ ಕಾದಂಬರಿ. 15 ನಾಟಕಗಳು ಮತ್ತು 11 ರಂಗರೂಪ ರಚನೆಗಳನ್ನು ಬರೆದಿದ್ದಾರೆ.

ಕೆಲಸವಾಗಬೇಕಲ್ಲ... ಅದು ಆರಂಭವಾಯಿತು. ವೈವಾ ಗೀವಾ ಎಂಥದ್ದೂ ಇಲ್ಲ, ನೆಟ್ ಪರೀಕ್ಷೆ ಪಾಸಾಗಿದ್ದರೆ ಸಾಕು ಮತ್ತು ಕೈಯಲ್ಲಿ ರೊಕ್ಕ ರೆಡಿಯಿದ್ದರೆ ಸೀಟು... ಎಂದು ಅನೌನ್ಸ್ ಮಾಡುತ್ತಲೇ ಹಸಿದ ಹುಲಿಗಳು ಅಲ್ಲಿಗೆ ಹೆಜ್ಜೆ ಕದಲಿಸಿದ್ದವು. ಇಷ್ಟಾಗಿಯೂ ಯಾಕೋ ಸೀಟುಗಳು ಬೇಗ ಭರ್ತಿಯಾಗುತ್ತಿಲ್ಲ ಎನಿಸಿದಾಗ ಹೊಸ ಹುಲಿಗಳು ಹಳೇ ಹುಲಿ ವರದರಾಜಪ್ಪನವರನ್ನು ಸಂಪರ್ಕಿಸಿ 'ನಿಮ್ಮ ಕಡೆ ಕ್ಯಾಂಡಿಡೇಟ್‌ಗಳಿದ್ದರೆ ಕಳಿಸಿಕೊಡಿ ಸಾ' ಎಂದಿದ್ದರು.

ಹೀಗೆ ಅವರನ್ನು ಕೇಳುವ ಹೊತ್ತಿನಲ್ಲೇ ವರದರಾಜಪ್ಪನವರ ಮುಂದೆ ಕೂತಿದ್ದವನು ಆರಾಧ್ಯ ಖಾಲಿಕೊಡ. ಆರಾಧ್ಯ ಎಂದಷ್ಟೇ ಅವನ ಹೆಸರು. ಖಾಲಿಕೊಡ ಎನ್ನುವುದು ಅವನು ಸೇರಿಸಿಕೊಂಡಿರುವುದು. ಇನ್ನೂ ಚಿಕ್ಕಪ್ರಾಯ. ಸಾಹಿತ್ಯ ಓದುವ ಉಮೇದು ಹೆಚ್ಚಿ ಜೊತೆಗೆ ವಿನಯವೂ ಅಧಿಕವಾಗಿ ತಾನು ಖಾಲಿಯಾಗಿರುವ ಕೊಡದ ಹಾಗೆ ಎಂದು ನಾಮಕರಣ ಮಾಡಿಕೊಂಡಿದ್ದವ; ಪ್ರಕಾಂಡ ಪಾಂಡಿತ್ಯದ ವಿಮರ್ಶಕ ಡಿ.ಆರ್.ಎನ್ ಅವರ ಬಗ್ಗೆ ಕೇಳಿಯೇ ತಾನೂ ಮೇಷ್ಟ್ರಾಗಬೇಕು ಎಂದು ನಿಶ್ಚಯಿಸಿ ತನ್ನ ಆಸೆಯನ್ನು ಸಾಕಾರ ಮಾಡಿಕೊಂಡು ಮಾತನ್ನು ಸೋಗು ಮಾಡಿಕೊಂಡಿದ್ದವನು. ಆ ಖಾಲಿಕೊಡಕ್ಕೆ ಕಾಲೇಜ್ ಒಂದರಲ್ಲಿ ರೆಕಮೆಂಡ್ ಮಾಡಿ ಪ್ರಾಧ್ಯಾಪಕನ ಕೆಲಸ ಕೊಡಿಸಿದ್ದೂ ವರದರಾಜಪ್ಪನವರೇ.

ಹೀಗೇ ಅಂದು ಮುಖಾಮುಖಿ ಕೂತು ಮಾತು ಸಾಗಿಸಿದ್ದಾಗ ವರದರಾಜಪ್ಪನವರು ಖಾಲಿಕೊಡವನ್ನು 'ಹೇಗಿದೆ ಕಾಲೇಜು?' ಎಂದು ಕೇಳಿದಾಗ ಖಾಲಿಕೊಡ, 'ಪಿಎಚ್.ಡಿ ಬೇಟೆ ಆಡಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ... ಆದರೆ ಅದು ಹೇಗೆ ಏನು ಎತ್ತ ಅಂತ ಗೊತ್ತಿಲ್ಲ' ಎಂದ ಕೆಲ ಹೊತ್ತಿಗೇ ಹೊಸ ಹುಲಿಗಳು ವರದರಾಜಪ್ಪನವರಿಗೆ ಫೋನ್ ಮಾಡಿದ್ದರು. ಎದುರಿಗೇ ಕೂತವನ ಕಂಡು ನಕ್ಕು 'ಆಗ್ಲಿ ಕಳಿಸ್ತೀನಿ ತಗಳ್ಳಿ' ಅಂತಂದು ಫೋನ್ ಇಟ್ಟ ವರದರಾಜಪ್ಪ ಖಾಲಿಕೊಡಕ್ಕೆ 'ಸೀಟ್ ಕೊಡಿಸ್ತೀನಿ. ಇಮ್ಮಿಡಿಯೇಟ್ ಜಾಯಿನ್ ಆಗಬೇಕು. ಆಗಂಗಿದ್ರೆ ಹೇಳು... ಮಾತಾಡ್ತೀನಿ' ಅಂದಾಗ ಖಾಲಿಕೊಡ ಖುಷಿಯಲ್ಲಿ ತುಂಬಿಬಂದಿತ್ತು. 'ಸರ್ ಒಂದಲ್ಲ... ಎರಡು ಸೀಟ್ ಬೇಕು... ಇಲ್ಲ ಅನ್ನಬೇಡಿ ಪ್ಲೀಸ್. ನೀವು ಹೇಳಿದ್ರೆ ಆಗೇ ಆಗುತ್ತೆ...' ಎಂದಾಗ ವರದರಾಜಪ್ಪ ಅಚ್ಚರಿಯಿಂದ ಮತ್ತು ಪ್ರಶ್ನಾರ್ಥಕವಾಗಿ ಅವನನ್ನ ನೋಡಿದ್ದರು. ಖಾಲಿಕೊಡ ನಾಚಿಕೊಳ್ಳುತ್ತ 'ಅದೇ ಸಾರ್... ಪ್ರಣತಿಗೂ ಒಂದು...' ಎಂದು ರಾಗ ತೆಗೆದಿದ್ದ. ವರದರಾಜಪ್ಪನವರಿಗೆ ತಕ್ಷಣಕ್ಕೆ ಏನೂ ಗೊತ್ತಾಗದಿದ್ದರೂ ಒಂದು ಮಟ್ಟಕ್ಕೆ ಊಹಿಸಿ ಸಣ್ಣಗೆ ನಕ್ಕು, 'ಆಗ್ಲಿ ತಗಾ ಕೊಡಿಸಾಣ' ಅಂತಂದು ಹೊಸ ಹುಲಿಯೊಂದಕ್ಕೆ ಫೋನ್ ಮಾಡಿ, 'ಒಂದಲ್ಲ ಎರಡು ಸೀಟ್ ಬೇಕು, ರಿಸರ್ವ್ ಮಾಡಿಡಿ' ಅಂತಂದು ಮತ್ತೆ ಖಾಲಿಕೊಡವನ್ನು ನೋಡಿ ನಗುತ್ತ, 'ಏನ್ಸಮಾಚಾರ?' ಎಂದಿದ್ದರು. ಖಾಲಿಕೊಡದ ಒಳಗೆ ಒಂದು ಸುಂದರ ಪ್ರೇಮಕಥೆ ಅಡಗಿ ಕೂತಿತ್ತು.

2

'ಈ ಕಾಲದಲ್ಲೂ- ಅದರಲ್ಲೂ ಕನ್ನಡ ಎಂ.ಎ. ಮಾಡ್ತೀನಿ ಅಂತ ಹೊರಟಿದ್ಯಲ್ಲ' ನಿನಗೆ ಏನು ಹೇಳಬೇಕು ಎಂದು ಪ್ರಣತಿ ಅಪ್ಪ ಅಮ್ಮ ಲೋಕಾರೂಢಿಯ ಮಾತಾಡಿ ಚಕಾರ ತೆಗೆದಿದ್ದರೂ ಅದರಿಂದ ಆಕೆ ಕೊಂಚವೂ ವಿಚಲಿತಳಾಗಿರಲಿಲ್ಲ. ನೇರ ಉತ್ತರ ಕೊಡೋಕೆ ತನಗೆ ಬರೋದಿಲ್ಲ... ತಾತ್ವಿಕವಾಗಿ ಹೇಳಿದರೆ ಅಪ್ಪಅಮ್ಮಗೆ ಅರ್ಥವಾಗಲ್ಲ ಎಂದು ತಿಳಿದು ಸುಮ್ಮನೆ ಒಂದು ಮಂದಹಾಸ ತುಳುಕಿಸಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಸ್ನಾತಕೋತ್ತರ ಪದವಿ ಗಳಿಸಲು ಸೀಟು ತೆಗೆದುಕೊಂಡಿದ್ದಳು. ಮೊದಲಿಂದ ಅವಳು ಸೀರಿಯಸ್ ರೀಡರ್. ಶಿವರಾಮ ಕಾರಂತರು ಅಂದರೆ ಅಚ್ಚುಮೆಚ್ಚು. ಅವರ ಪ್ರತಿ ಕಾದಂಬರಿ ಓದಿದ ತರುವಾಯ ಅವಳನ್ನು ಅಗಾಧ ಮೌನ